# ಅಂದಿಂದ ನಾ ನಿನ್ನ ನೆರೆನಂಬಿದೆನೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 12.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 272.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 137.
4. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 192.
5. **Note:** Lyrics given here are as per Ref. 1. The wordings in other reference books above are same as in Ref. 1 with very few minor variations which are not considered here.

ರಾಗ: ಕಲ್ಯಾಣಿ ತಾಳ: ತ್ರಿಪುಟ

ಅಂದಿಂದ ನಾ ನಿನ್ನ ನೆರೆ ನಂಬಿದೆನೊ ಕೃಷ್ಣ || ಪ ||
ತಂದೆ ಗೋವಿಂದ ಮುಕುಂದ ನಂದನ ಕಂದ || ಅಪ ||

ಬಲವಂತನುತ್ತಾನಪಾದರಾಯನ ಕಂದ
ಮಲತಾಯಿ ನೂಕಲು ಅಡವಿಯೊಳು
ಜಲಜಾಕ್ಷ ನಿನ್ನ ಕುರಿತ ತಪವಿರಲಾಗಿ
ಒಲಿದು ಧ್ರುವಗೆ ಪಟ್ಟ ಗಟ್ಟಿದ್ದು ಕೇಳಿ || 1 ||

ನಕ್ರಂಗೆ ಗಜರಾಜ ಸಿಕ್ಕು ಸರಸಿಯೊಳು
ದುಃಖದಿ ಶ್ರೀಹರಿ ಸಲಹೆನ್ನಲು
ಚಕ್ರದಿ ನೆಗಳ ಕಂಠವ ತರಿದು ಭಕ್ತನ
ವಕ್ರವ ಪರಿದಾದಿ ಮೂಲನೆಂಬುದ ಕೇಳಿ || 2 ||

ದ್ರುಪದನ ಸುತೆಯ ದುಶ್ಯಾಸನ ಸಭೆಯೊಳು
ಕಪಟದಿ ಸೀರೆಯ ಸೆಳೆಯುತಿರೆ

ಸುಪರ್ಣ ವಾಹನ ಕೃಷ್ಣ ಸಲಹೆಂದರಬಲೆಯ
ಅಪಮಾನದಿಂ ಕಾಯ್ದ ಶ್ರೀಹರಿಯೆಂಬುದ ಕೇಳಿ || 3 ||

ಹರಿ ನಾರಾಯಣಯೆಂದು ಪ್ರಹ್ಲಾದ ಒರೆಯಲು
ದುರುಳ ದಾನವನವನೊಳು ಮುನಿದು
ಕರೆ ನಿನ್ನ ಒಡೆಯನ ಎಂದು ಗರ್ಜಿಸೆ ನರ-
ಹರಿ ಬಂದು ಒಡನೆಯೆ ಕಾಯ್ದನೆಂಬುದ ಕೇಳಿ || 4 ||

ಅಂಬರೀಷಗೆ ದುರ್ವಾಸ ಶಾಪವ ಕೊಡೆ
ಅಂಬುಜಲೋಚನ ಚಕ್ರದಿಂದ
ಬೆಂಬತ್ತಿ ಮುನಿಯ ಶಾಪವ ಪರಿಹರಿಸಿದ
ಕಂಬು ಚಕ್ರಧರ ಹರಿಯೆಂಬುದ ಕೇಳಿ || 5 ||

ಛಲ ಬೇಡ ರಾಮನ ಲಲನೆಯ ಬಿಡುಯೆಂದು
ತಲೆ ಹತ್ತರವಗೆ ಪೇಳಲು ತಮ್ಮನ
ಬಳಲಿಸಿ ಹೊರಡಿಸಲವ ನಿನ್ನ ಮೊರೆ ಹೋಗೆ
ಸಲೆ ವಿಭೀಷಣಗೆ ಲಂಕೆಯನಿತ್ತುದ ಕೇಳಿ || 6 ||

ಸುರ ನರ ನಾಗಲೋಕದ ಭಕ್ತ ಜನರನ್ನು
ಪೊರೆಯಲೋಸುಗ ವೈಕುಂಠದಿಂದ
ಸಿರಿ ಸಹಿತಲೆ ಬಂದು ಶೇಷಾಚಲದಿ ನಿಂದ
ಪುರಂದರ ವಿಠಲ ನಿನ್ನಯ ಚರಣವ ಕಂಡು || 7 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಉತ್ತಾನಪಾದರಾಯನ ಕಂದ** – ಧ್ರುವ.

**ಉತ್ತಾನಪಾದ :-** ಸ್ವಾಯಂಭುವ ಮನು ಹಾಗು ಶತರೂಪ ಇವರ ಕಿರಿಯ ಮಗ. ಈತನಿಗೆ ಸುನೀತಿ ಮತ್ತು ಸುರುಚಿ ಎಂಬ ಇಬ್ಬರು ಹೆಂಡಂದಿರು. ಧ್ರುವನು ಸುನೀತಿಯ ಮಗನು.

**ಮಲತಾಯಿ** – ಸುರುಚಿ.

**ಅಕ್ಕಸ** = ಮೊರೆ

**ನಕ್ರಂಗೆ** – ಮೊಸಳೆಗೆ (ನೆಗಳು) (ಗಜೇಂದ್ರಮೋಕ್ಷ).

**ವಕ್ರವ ಪರಿದು** – ಇಂದ್ರದ್ಯುಮ್ನನಿಗೆ (ಗಜೇಂದ್ರನಾಗಿ) ಬಂದಿದ್ದ ಶಾಪವನ್ನು ಹೋಗಲಾಡಿಸಿ.

**ದ್ರುಪದನ ಸುತೆ** – ದ್ರೌಪದಿ (ವಸ್ತ್ರಾಪಹರಣದ ಸಂದರ್ಭ).

**ದುರುಳ ದಾನವ** – ಹಿರಣ್ಯಕಶಿಪು (ಪ್ರಹ್ಲಾದನ ಉಪಾಖ್ಯಾನ; ನರಸಿಂಹಾವತಾರದ ಕತೆ).

**ಅಂಬರೀಷ** – ಸೂರ್ಯವಂಶದಲ್ಲಿ ನಾಭಾಗರಾಜನ ಮಗನಾಗಿ ಹುಟ್ಟಿದವನು; ವಿಷ್ಣು ಭಕ್ತ, ಪರಮಭಾಗವತ. ಅವನ ಏಕಾದಶೀವ್ರತವನ್ನು ಕೆಡಿಸಬೇಕೆಂದು ದುರ್ವಾಸನು ದ್ವಾದಶಿಯ ಪಾರಣೆಗೆ ಹೊತ್ತುಮೀರಿ ಬಂದನು; ವ್ರತದ ಕಟ್ಟಳೆಯನ್ನು ಮೀರಲಾರದೆ ಅಂಬರೀಷನು ಆ ವೇಳೆಗಾಗಲೇ ತೀರ್ಥಪ್ರಾಶನ ಮಾಡಿದ್ದುದರಿಂದ ದುರ್ವಾಸನು ಸಿಟ್ಟಿಗೆದ್ದು ಅವನನ್ನು ಶಪಿಸಲು, ವಿಷ್ಣುವಿನ ಚಕ್ರಾಯುಧವು ದುರ್ವಾಸನ ಮೇಲೆ ಎರಗಿ ಬಂದಿತು. ಅದರ ಕಾಟವನ್ನು ತಡೆಯಲಾರದೆ ದುರ್ವಾಸನು ಅಂಬರೀಷನನ್ನೇ ಮೊರೆಹೊಕ್ಕು ತನ್ನ ಶಾಪವನ್ನು ಹಿಂದೆಗೆದುಕೊಳ್ಳಬೇಕಾಯಿತು (ಭಾಗವತಪುರಾಣ 9, 4).

**ಛಲ ಬೇಡ** – ರಾಮಾಯಣದ ಕಥೆ. ರಾವಣನು (ತಲೆ ಹತ್ತರವನು ಛಲಗಾರನೆಂದು ಹೆಸರಾದವನು. ಯುದ್ಧಕ್ಕೆ ಮುನ್ನ ಅವನು ಕರೆದ ಸಭೆಯಲ್ಲಿ ತಮ್ಮನಾದ ವಿಭೀಷಣನು ಸೀತೆಯನ್ನು ಮರಳಿ ರಾಮನಿಗೆ ಸಲ್ಲಿಸೆಂದು ಸೂಚಿಸಲು ಸಿಟ್ಟಿನಿಂದ ವಿಭೀಷಣನನ್ನು ಮೂದಲಿಸಿ ಅವನು ಲಂಕೆಯನ್ನು ಬಿಡುವಂತೆ ಮಾಡಿದ.

**ಸಿರಿಸಹಿತ...** – 'ಸ್ವಾಮಿ ಪುಷ್ಕರಿಣೀತತೀರೇ ರಮಯಾ ಸಹ ಮೋದತೇ' ಎಂಬ ಪುರಾಣೋಕ್ತಿಯ ಛಾಯೆ.

**ತಲೆ ಹತ್ತರವ** = ರಾವಣ

**Classification:** Keerthane
**Ankita:** purandara vittala
**Location:** NA
**Category:** Pooja Tatva, Hari Sarvottama.

**Sub-Category:** Krishna, govinda, tande, mukunda, nanda, Dhruva, tapa, kaadu, mosale, gaja, dukha, drupada, kourava, draupadi, apamana, Narayana, prahallada, Narasimha, ambarisha, muni, shapa, chakra, rama, sita, Vibhishana, lanka, jana, vaikunta, Tirupati,

**Pravachana:** NA

**Explanation:** NA